ಬೆಂಗಳೂರು ನಗರ ಜಿಲ್ಲೆಯಲ್ಲಿ ಕೃಷಿಯೇತರ ಜಮೀನನ್ನಾಗಿ ಪರಿವರ್ತಿಸುವುದು.

8 (263) ಶ್ರೀ ಅಶ್ವತ್ಥ್ ಎಂ.ಸಿ. (ಚನ್ನಪಟ್ಟಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಕಂದಾಯ ಇಲಾಖಾವತಿಯಿಂದ ದಿನಾಂಕ: 01.05.2008 ರಿಂದ 22.02.2010 ರವರೆವಿಗೂ ಕೃಷಿ ಜಮೀನುಗಳನ್ನು ಕೃಷಿಯೇತರ ಜಮೀನುಗಳಾಗಿ ಪರಿವರ್ತಿಸಿದ ಜಮೀನುಗಳ ವಿಸ್ತೀರ್ಣವೆಷ್ಟು (ಜಿಲ್ಲಾವಾರು ಜಮೀನುಗಳ ವಿಸ್ತೀರ್ಣವಾರು ಮಾಹಿತಿ ನೀಡುವುದು);

ಆ) ಸರ್ಕಾರಿ ಉದ್ದೇಶಕ್ಕಾಗಿ ಕೃಷಿ ಜಮೀನುಗಳನ್ನು ಕೃಷಿಯೇತರ ಜಮೀನುಗಳನ್ನಾಗಿ ಪರಿವರ್ತಿಸಿದ ಜಮೀನುಗಳ ವಿಸ್ತೀರ್ಣವೆಷ್ಟು, ಯಾವ ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ (ಪೂರ್ಣ ವಿವರ ನೀಡುವುದು);

ಇ) ಖಾಸಗಿಯವರು ಕೃಷಿ ಜಮೀನುಗಳನ್ನು ಕೃಷಿಯೇತರ ಜಮೀನುಗಳನ್ನಾಗಿ ಪರಿವರ್ತಿಸಲು ಸಲ್ಲಿಸಿದ ಅರ್ಜಿಗಳೆಷ್ಟು; ಇವುಗಳಲ್ಲಿ ಮಂಜೂರಾತಿ ದೊರೆತ ಜಮೀನುಗಳ ವಿಸ್ತೀರ್ಣಗಳೆಷ್ಟು; ಹಾಗೂ ಮಂಜೂರಾತಿ ನೀಡದೆ ತಿರಸ್ಕರಿಲ್ಪಟ್ಟ ಜಮೀನುಗಳ ವಿಸ್ತೀರ್ಣವೆಷ್ಟು; ತಿರಸ್ಕರಿಸಲು ಕಾರಣಗಳೇನು (ಜಿಲ್ಲಾವಾರು ಜಮೀನುಗಳ ವಿಸ್ತೀರ್ಣವಾರು ಮಾಹಿತಿ ನೀಡುವುದು);

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಕೃಷಿ ಜಮೀನನ್ನು ಕೃಷಿಯೇತರ ಜಮೀನುಗಳನ್ನಾಗಿ ಭೂ ಪರಿವರ್ತಿಸಲಾದ ಜಮೀನಿನ ವಿಸ್ತೀರ್ಣ 5349 ಎಕರೆ 35 ಗುಂಟೆ.

ಆ) ಸರ್ಕಾರಿ ಉದ್ದೇಶಕ್ಕಾಗಿ ಕೃಷಿ ಜಮೀನನ್ನು ಭೂ ಪರಿವರ್ತಿಸಿರುವುದಿಲ್ಲ.

ಇ) ಸಲ್ಲಿಸಿದ ಅರ್ಜಿಗಳ ಸಂಖ್ಯೆ: 3810.

ಮಂಜೂರಾತಿ ವಿಸ್ತೀರ್ಣ: 5349.35 ಎಕರೆ.

ತಿರಸ್ಕೃತ ವಿಸ್ತೀರ್ಣ: 1713.15 ಎಕರೆ – ಅಗತ್ಯ ದಾಖಲೆಗಳನ್ನು ನೀಡದ ಕಾರಣ ಹಾಗೂ ಸಕ್ರಮ ಪ್ರಾಧಿಕಾರಗಳಿಂದ ಭೂ ಪರಿವರ್ತನೆ ಬಗ್ಗೆ ಅಭಿಪ್ರಾಯ ಬಾರದಿರುವ ಕಾರಣ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.